ಹತ್ತನೇ ಶತಮಾನವನ್ನ ಅರ್ಥ ಮಾಡಿಕೊಳ್ಳಲಿಕ್ಕೆ ಪಂಪನನ್ನ ಬಳಸ್ತಾ ಇದ್ದೀವಿ. ಕೊನೆಗೂ ನಮಗೆ ಯಾವುದು ಅಧಿಕೃತ ಆಗ್ತಿದೆ ಅಂದ್ರೆ ಪಠ್ಯ ಅಲ್ವೆ. ಟೆಕ್ಸ್ಟ್ ಇವ್ಯಾಲುವೇಟ್ ಮಾಡ್ಲಿಕ್ಕಾಗುವುದಿಲ್ಲ ನಮಗೆ. ಸಾಮಾಜಿಕ ಕ್ರಿಟಿಸಿಸಂನಲ್ಲಿ ನಾವೇನ್ ಮಾಡ್ತೇವೆ. ಸಮಾಜದ ಬಗ್ಗೆ ನಮಗೊಂದು ತಿಳಿವಳಿಕೆ ಇದೆ. ಈ ತಿಳಿವಳಿಕೆಯನ್ನ ಕೃತಿಕಾರರು ತನ್ನ ಕೃತಿಯಲ್ಲಿ ಸರಿಯಾಗಿ ಬಳಸ್ಕೊಂಡಿದಾರೊ ಇಲ್ವೊ? ಅಥವಾ ಅದನ್ನ ಕನ್‌ಫರ್ಮ್ ಮಾಡ್ತಿದ್ದಾರೊ ಇಲ್ವೊ? ಕ್ವೆಶ್ಚನ್ ಮಾಡ್ತಿದ್ದಾರೊ ಇಲ್ವೊ? ಅಥವಾ ಆ ತಿಳಿವಳಿಕೆಯನ್ನ ಬದಲಾಯಿಸುವಷ್ಟು ಶಕ್ತವಾಗಿದೆಯೆ ಇದು? ಇದನ್ನೆಲ್ಲ ಗಮನಿಸಬೇಕಾದರೆ ಪಠ್ಯಕ್ಕೆ ನೀವು ಪ್ರಾಧಾನ್ಯತೆ ಕೊಡಬೇಕಾಗ್ತದೆ. ಯಾಕಂದ್ರೆ, ಅದೇ ನಮಗೆ ಲೋಕವನ್ನ ಕಾಣಿಸ್ತಾ ಇದೆ. ಈ ಲೇಖನ ಬರೆಯುವಾಗ ನಾನು ಶಿವರಾಮ ಕಾರಂತರ ಕುರಿತು ಒಂದು ದೀರ್ಘ ಲೇಖನ ಬರೆದಿದ್ದೆ. ಇದರೊಳಗೆ ನನ್ನ ಈ ಸೂಚನೆಗಳಿದ್ವು. ಕಾರಂತರ ಕಾದಂಬರಿಗಳನ್ನಿಟ್ಟುಕೊಂಡು ನಾವು ಏನೇ ಮಾತನಾಡಲಿ, ಅಂದ್ರೆ ದಕ್ಷಿಣ ಕನ್ನಡದ ಬಗ್ಗೆ, ಸಮಾಜದ ಬಗ್ಗೆ, ಅವರ ವಿಚಾರವಾದದ ಬಗ್ಗೆ ಆದರೆ ಇದೆಲ್ಲವು ಅಧಿಕೃತಗೊಳ್ಳುವುದು ಪಠ್ಯದೊಳಗೆ ಮಾತ್ರ. ಕಾರಂತರು ತಮ್ಮ ಕಾಲಕ್ಕಿಂತ ಹಿಂದಿನ ವಸ್ತುವನ್ನು ಯಾಕೆ ತೆಗೆದುಕೊಳ್ತಾ ಇದ್ರು. ಸಮಕಾಲೀನ ವಸ್ತುಗಳನ್ನು ತೆಗೆದುಕೊಂಡಾಗ ಏನಾಗ್ತಾ ಇತ್ತು. ಕಾದಂಬರಿಗಳ ಶಿಲ್ಪದಲ್ಲಿ ಯಾಕೆ ವ್ಯತ್ಯಾಸಗಳನ್ನ ಮಾಡಿಕೊಂಡ್ರು. ಇದೆಲ್ಲವನ್ನು ನಾನು ಗಮನಿಸ್ತಿದ್ದೆ. ಎಲಿಯೆಟ್ ಬಗ್ಗೆ ಬರೆಯುವಾಗ ಮಾತ್ರ ಇದು ಬಂದದ್ದಲ್ಲ. ಅನೇಕ ವರ್ಷಗಳಿಂದ ಇಂಥದ್ದೊಂದು ತಿಳಿವಳಿಕೆ ನನ್ನ ಮನಸ್ಸಿನಲ್ಲಿ ಎವಾಲ್ವ್ ಆಗ್ತಾ ಇತ್ತು. ಆಮೇಲೆ 'ಇತ್ತೀಚಿನ ಸಾಹಿತ್ಯ ವಿಮರ್ಶೆ ಮತ್ತು ಅನ್ಯ ಪ್ರಭಾವಗಳು' ಕುರಿತು ಬರೆದ ಲೇಖನದಲ್ಲೂ ಇಂಥದ್ದೊಂದು ಚಿಂತನೆ ಇತ್ತು.

**◆ ಹಿಂದಿನ ಪ್ರಶ್ನೆಯನ್ನೆ ಮುಂದುವರೆಸಿ ಕೇಳ್ತಿದ್ದೀನಿ. ಕನ್ನಡ ಸಾಹಿತ್ಯ ವಿಮರ್ಶೆಯ ಚಟುವಟಿಕೆ ಬಗ್ಗೆ ನೀವು ಅನೇಕ ಕಡೆ ಪ್ರಸ್ತಾಪಿಸಿದ್ದೀರಿ. ಅದು ಯಾಕೆ ಸೊರಗ್ತಾ ಇದೆ ಅಂತಂದ್ರೆ, ದೇಸೀಯವಾದ ನೆಲೆಗಳನ್ನು ಹೊಂದದೇ ಇರೋದ್ರಿಂದ ಮತ್ತು ಹೆಚ್ಚು ಪರಾವಲಂಬಿಯಾಗಿರೋದ್ರಿಂದ ಅನ್ನುವ ವಾದವನ್ನ ಮುಂದಿಟ್ಟಿದ್ರಿ. ಈ ದೇಸೀಯವಾದ ನೆಲೆಗಳು ಅಂತಂದ್ರೆ ದೇಸೀವಾದವೊ? ಅಥವಾ ಸ್ಥಳೀಯ ವಿಭಿನ್ನ ತಾತ್ವಿಕ ನೆಲೆಗಳೊ?**

ಕ್ರೈಸಿಸ್ಸು ಹಲವಾರು ಫೇಸ್‌ಗಳಲ್ಲಿ ಇರ್ತದೆ. ಇದೊಂದು ಫೇಸ್ ಅಷ್ಟೆ. ಈ ಕ್ರೈಸಿಸ್ ನನಗೆ ಮೊದಲು ಕಂಡದ್ದು ಬೇಂದ್ರೆ ಅವರಲ್ಲಿ. ಬೇಂದ್ರೆ ಅವರು ಸಂಸ್ಕೃತ ಕಾವ್ಯಮೀಮಾಂಸೆ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆ ಎರಡನ್ನೂ ಓದಿಕೊಂಡೋರು. ಆದರೆ, ಎರಡರಲ್ಲಿ ಯಾವುದನ್ನೂ ಅವರು ಅನ್ವಯಿಸೋದಿಲ್ಲ ವಿಮರ್ಶಕರಾಗಿ. ಕುಮಾರವ್ಯಾಸ ಮತ್ತು ಲಕ್ಷ್ಮೀಶ ಇವರಿಬ್ಬರನ್ನು ತೌಲನಿಕವಾಗಿ ಅಧ್ಯಯನಿಸಿ ಬರೆಯುವಾಗ ಅವರಿಗೆ ಲಕ್ಷ್ಮೀಶ ಯಾಕೆ ಮುಖ್ಯನಾಗಿ ಕಂಡ. ಜೈಮಿನಿಭಾರತದ ಬಗ್ಗೆ ಬಹಳ ದೀರ್ಘವಾಗಿ ಬರೆದಿದ್ದಾರೆ. ಅವರ ಮಗನಿಂದ ಥೀಸಿಸ್ ಕೂಡ ಮಾಡಿಸಿದ್ರು. ಲಕ್ಷ್ಮೀಶ ಕನ್ನಡದ ಕೊನೆಯ ಅಭಿಜಾತ ಕವಿ. ಅವನ ಶೈಲಿ ಬಗ್ಗೆ ತುಂಬಾ ಮೋಹಿತರಾಗಿ ಬರೆದಿದ್ದಾರೆ. 'ಮಲ್ಲಿನಾಥ ಪುರಾಣ'ದ ಬಗ್ಗೆ ಬರೀವಾಗ್ಲೂ ಕೂಡ. ಅದನ್ನ ಸಾವಿರ ಕಂಬದ ಬಸದಿಗೆ ಹೋಲಿಸಿದ್ದಾರೆ. ಅಂದ್ರೆ ಅದನ್ನೆಲ್ಲ ನೋಡಲು ಬೇಕಾದ ಪರಿಕರವೊಂದು ಅವರಿಗೆ ಆ ಕೃತಿಯಲ್ಲೇ ಕಾಣಿಸ್ತಿದೆ. ರಚನೆ ಒಳಗೇನೆ ಕಾಣಿಸ್ತಿದೆ. ಸಂಸ್ಕೃತ ಕಾವ್ಯಮೀಮಾಂಸೆ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸೆ ಗೊತ್ತಿದ್ರೂ ಅವುಗಳಿಂದ ಅವರು ಪರಿಕರಗಳನ್ನ ಸ್ವೀಕರಿಸ್ತಾ ಇಲ್ಲ. ಸಾಹಿತ್ಯ ಪರಂಪರೆಯೊಳಗಿನಿಂದಲೇ ಅವರು ಪರಿಕರಗಳನ್ನ ಹುಡುಕಿಕೊಳ್ತಿದ್ದಾರೆ. ದೇಸೀಯ ನೆಲೆಗಳು ಅಂದ್ರೆ ಬಹುಶಃ ಇದೇ ಇರಬಹುದೇನೊ. ಕುವೆಂಪು

